# ಡೊಂಕುಬಾಲದ ನಾಯಕರು

'ಡೊಂಕು ಬಾಲದ ನಾಯಕರೆ, ನೀವೇನೂಟವ ಮಾಡಿದಿರಿ...?' ಎಂದು ಪ್ರಾರಂಭವಾಗುವ ಪುರಂದರದಾಸರ ಹಾಡೊಂದಿದೆ. ಮೂರು ಚರಣಗಳಿರುವ ಈ ಹಾಡು ಆಹಾರವನ್ನು ಅರಸಿಕೊಂಡು ಅಲೆಯುತ್ತಿರುವ ಬೀದಿನಾಯಿಯ ಚಲನವಲನಗಳನ್ನು ನಗೆಗಣ್ಣಿನಿಂದ ನೋಡುತ್ತಲೇ ಮನುಷ್ಯನ ಸ್ವಭಾವವನ್ನು ಗೇಲಿ ಮಾಡುವಂತಿದೆ. ಆಹಾರಕ್ಕಾಗಿ ಹಾತೊರೆಯುತ್ತಿರುವ ನಾಯಿ ಕಣಕ ಅಥವಾ ಹಿಟ್ಟು ಕುಟ್ಟುವ ಸ್ಥಳಕ್ಕೆ ಹೋಗಿ ಒನಕೆಯೇಟು ತಿನ್ನುತ್ತದೆ; ಇನ್ನೊಮ್ಮೆ ಹುಗ್ಗಿ ಮಾಡುವ ಸ್ಥಳಕ್ಕೆ ನುಗ್ಗಿ ಸೌಟಿನಲ್ಲಿ ಹೊಡೆಸಿಕೊಂಡು ನೋವು, ಅಪಮಾನಗಳನ್ನು ಅನುಭವಿಸುತ್ತದೆ. ಹೀಗೆ ನಾಯಿಯಲ್ಲಿನ ಆಹಾರದ ಚಾಪಲ್ಯ ಅದಕ್ಕಿರಬೇಕಾದ ಮಾನಾಪಮಾನವನ್ನು ಕುರಿತಾದ ವಿವೇಕ ಪ್ರಜ್ಞೆಯನ್ನು ಮರೆಮಾಡುತ್ತದೆ. ಅನುಭವದಿಂದ ಅದು ಪಾಠವನ್ನೂ ಕಲಿಯುವುದಿಲ್ಲ. ಅದರ ಬುದ್ಧಿ ಎಂದಿಗೂ ನೆಟ್ಟಗಾಗುವುದಿಲ್ಲ. ಆದ್ದರಿಂದಲೇ ಅದನ್ನು 'ಡೊಂಕು ಬಾಲದ ನಾಯಕರೇ' ಎಂದು ಕರೆಯುತ್ತಾರೆ ದಾಸರು!

ಇಲ್ಲಿ ಸ್ಪಷ್ಟವಾಗಿಯೇ ದಾಸರು ನಾಯಿಯ ನೆಪಮಾಡಿಕೊಂಡು ಮನುಷ್ಯನ ಚಪಲ ಪ್ರವೃತ್ತಿಯನ್ನು ವಿಡಂಬಿಸಿದ್ದಾರೆ. ಮನುಷ್ಯನನ್ನು ಕುಬ್ಜನನ್ನಾಗಿಸುವ ದೌರ್ಬಲ್ಯಗಳಲ್ಲಿ ಆಶೆಬುರುಕತನವೂ ಒಂದು. ಈ ದೌರ್ಬಲ್ಯಕ್ಕೆ ಒಳಗಾಗಿರುವ ವ್ಯಕ್ತಿ ತನಗೆ ಎಟುಕದ ವಸ್ತುವಿಗಾಗಿ ಹಪಹಪಿಸುತ್ತಾ, ಅದನ್ನು ಪಡೆಯುವ ಪ್ರಯತ್ನದಲ್ಲಿ ಇತರರಿಂದ ತಿರಸ್ಕಾರ ಹಾಗೂ ಅಪಮಾನ ಎರಡನ್ನೂ ತನ್ನ ಮೇಲೆ ಎಳೆದುಕೊಳ್ಳುತ್ತಾನೆ. ದಾಸರು ವರ್ಣಿಸಿರುವಂತೆ ಕಣಕ ಕುಟ್ಟುವ ಸ್ಥಳದಲ್ಲಿ ಇಣುಕಿ ನೋಡುವ, ಹುಗ್ಗಿ ಮಾಡುವಲ್ಲಿ ನುಗ್ಗಿ ಜೊಲ್ಲು ಸುರಿಸುತ್ತಾ ನಿಲ್ಲುವ ನಾಯಿಯ ಬಗ್ಗೆ ಯಾರಿಗೂ ಪ್ರೀತಿಯಾಗಲೀ, ಗೌರವವಾಗಲೀ ಹುಟ್ಟುವುದು ಸಾಧ್ಯವಿಲ್ಲವಷ್ಟೆ? ಅಂಥ ನಾಯಿ ಒನಕೆಯಿಂದಲೋ, ಸೌಟಿನಿಂದಲೋ ಏಟು ತಿಂದು ಕುಂಯ್ ಕುಂಯ್ ಗುಟ್ಟುತ್ತಾ ಬಾಲ ಮುದುರಿಸಿಕೊಂಡು ಪಲಾಯನ ಮಾಡುತ್ತದೆ. ಮನುಷ್ಯನ ಆಶೆಬುರುಕತನದ ಪರಿಣಾಮವೂ ಇಂಥದೇ. ಸ್ವಂತಿಕೆ, ಯೋಗ್ಯತೆ, ಕಾರ್ಯಕ್ಷಮತೆ, ಪ್ರತಿಭೆ–ಇತ್ಯಾದಿಗಳು ಯಾವುದೂ ಇಲ್ಲದೆ, ಇನ್ನೊಬ್ಬರ ಅನುಗ್ರಹ ಆಶ್ರಯಗಳಿಗಾಗಿ ಹಾತೊರೆಯುವಾತ ಸಮಾಜದ ತಿರಸ್ಕಾರಕ್ಕೆ ಒಳಗಾಗುತ್ತಾನೆ. ಆತನ ಪಾಡು ನಾಯಿಪಾಡಾಗುತ್ತದೆ.

'ಡೊಂಕು ಬಾಲದ ನಾಯಕರು' ಎನ್ನುವ ದಾಸರ ಮಾತಿನ ಹಿಂದೆ ಬೇರೊಂದು ವ್ಯಂಗ್ಯಧ್ವನಿಯೂ ಸೇರಿಕೊಂಡಿದೆ ಎನ್ನಿಸುತ್ತದೆ. 'ನಾಯಕ' ಎಂಬ ಮಾತಿಗೆ 'ಮುಖಂಡ' ಎಂಬ ಅರ್ಥವೂ ಇದೆಯಷ್ಟೆ? ಸ್ಥಾನ, ಅಧಿಕಾರ ಮುಂತಾದವುಗಳಿಗಾಗಿ ನಾಯಿಗಳಂತೆ ಹಪಹಪಿಸುವ ಸ್ವಯಂಘೋಷಿತ ನಾಯಕರನ್ನು ಪುರಂದರದಾಸರು ಕಣ್ಣಾರೆ ನೋಡಿದ್ದಿರಬಹುದು. ಈಗಂತೂ ರಾಜಕೀಯ ವಲಯದಲ್ಲಿ ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧವಿರುವ ಜನನಾಯಕರನ್ನು ದಿನ ನಿತ್ಯ ಮಾಧ್ಯಮಗಳಲ್ಲಿ ಕಾಣುತ್ತಿರುತ್ತೇವೆ. ತಾವು ಪಡೆಯಬೇಕೆಂದಿರುವ ಅಧಿಕಾರ ಸ್ಥಾನಗಳಿಗಾಗಿ ಅಂಥ ನಾಯಕರು ಪಕ್ಷದ ವರಿಷ್ಠರನ್ನು ಗೋಗರೆಯುತ್ತಾರೆ; ಕೋಟ್ಯಧಿಪತಿಗಳನ್ನು ಓಲೈಸುತ್ತಾರೆ; ಮಠಾಧಿಪತಿಗಳ ಕೃಪೆಗಾಗಿ ಕಾಯುತ್ತಾರೆ. ಇದೆಲ್ಲದರ ಪರಿಣಾಮವಾಗಿ ಜನತೆಯ ದೃಷ್ಟಿಯಲ್ಲಿ ಹಗುರಾಗುತ್ತಾರೆ; ತಿರಸ್ಕರಿಸಲ್ಪಡುತ್ತಾರೆ. ಆದರೆ ಅಧಿಕಾರ ದಾಹದಿಂದ ನರಳುವ ಅಂಥ ನಾಯಕರು ತಮ್ಮ ಅನುಭವದಿಂದ ಯಾವುದೇ ಪಾಠ ಕಲಿಯುವುದಿಲ್ಲ. ಅವರ ವಿವೇಕ ಜಾಗೃತವಾಗುವುದಿಲ್ಲ. ದಾಸರು ಅಂಥ ಮಂದಿಯನ್ನೇ 'ಡೊಂಕು ಬಾಲದ ನಾಯಕರು' ಎಂದು ಗೇಲಿ ಮಾಡಿರಬಹುದು. ತಮ್ಮ ಹಾಡಿನ ಕೊನೆಯ ಚರಣದಲ್ಲಿ ದಾಸರು ಅಂಥ ನಾಯಕರನ್ನು ಕುರಿತು 'ಹಿರೇ ಬೀದಿಯಲಿ ಓಡುವಿರಿ, ಕರೇ ಬೀದಿಯಲಿ ಹೊರಳುವಿರಿ' ಎಂದು ಛೇಡಿಸಿದ್ದಾರೆ. ತಾವು ರಾಜ ಮಾರ್ಗದಲ್ಲೇ (ಹಿರೇಬೀದಿಯಲ್ಲಿಯೇ) ಸಕಲ ಗೌರವಗಳಿಂದ ಪ್ರಯಾಣ ಮಾಡುತ್ತಿರುವವರೆಂದು ತೋರಿಸಿಕೊಳ್ಳುವ ಈ ಜನ ತಮ್ಮ ಚಾಪಲ್ಯ ತೀರಿಸಿಕೊಳ್ಳಲು ಕರಿಯ ಬೂದಿಯಲ್ಲಿ ಹೊರಳಾಡುವಷ್ಟು ಸಣ್ಣವರಾಗುತ್ತಾರೆ ಎಂಬ ದಾಸರ ಮಾತು ಎಲ್ಲಕಾಲಕ್ಕೂ ಸತ್ಯ.

ಈ ಹಾಡಿಗೆ ಇನ್ನೊಂದು ಧ್ವನಿ ಸಾಧ್ಯತೆಯೂ ಇದೆ. ಸ್ವಯಂ ಪುರಂದರದಾಸರೇ ಆತ್ಮಾವಲೋಕನ ಮಾಡಿಕೊಳ್ಳುತ್ತಾ ತಮ್ಮನ್ನು ತಾವೇ 'ಡೊಂಕು ಬಾಲದ ನಾಯಕ'ರೆಂದು ಭರ್ತ್ಸನೆ ಮಾಡಿಕೊಂಡಿರಲೂ ಬಹುದು. ಪೂರ್ವಾಶ್ರಮದಲ್ಲಿ ಶ್ರೀನಿವಾಸ 'ನಾಯಕ'ರಾಗಿದ್ದ ಅವರು ಲೋಭ, ಜಿಪುಣತನ, ಸ್ವಾರ್ಥ ಮುಂತಾದವುಗಳಿಂದ ಪೀಡಿತರಾಗಿದ್ದರೆಂಬುದು ಇತಿಹಾಸ. ಈಗ ದಾಸರಾಗಿ, ಎಲ್ಲ ರಾಗಗಳಿಂದ ಮುಕ್ತರಾಗಿದ್ದಾರೆ. ತಮ್ಮ ಗತ ಜೀವನವನ್ನು ವಿಮರ್ಶೆ ಮಾಡಿಕೊಳ್ಳುತ್ತಾ 'ಡೊಂಕು ಬಾಲದ ನಾಯಕರೆ, ನೀವೇನೂಟವ ಮಾಡಿದಿರಿ?' ಎಂದು ತಮಗೆ ತಾವೇ ಪ್ರಶ್ನಿಸಿಕೊಂಡಿದ್ದಿರಬಹುದಲ್ಲವೇ? ಇಷ್ಟಕ್ಕೂ ಮನುಷ್ಯರೆಲ್ಲರೂ ತಮ್ಮ ಬದುಕಿನಲ್ಲಿ ಇಂಥ 'ನಾಯಿ ಪಾಡಿ'ಗೆ ಒಳಗಾಗಿರುವ ಅವಸ್ಥೆಯನ್ನು ಒಮ್ಮೆಯಾದರೂ ಅನುಭವಿಸಿರುತ್ತಾರೆ. ಏಕೆಂದರೆ ಇಂದ್ರಿಯಗಳ ಒತ್ತಡ ಅಷ್ಟು ಪ್ರಬಲವಾದುದು, ಆದ್ದರಿಂದಲೇ ಗೀತೆ 'ಇಂದ್ರಿಯಾಣಿ ಪ್ರಮಾಥೀನಿ ಹರಂತಿ ಪ್ರಸಭಂ ಮನಃ' ಎಂದಿರುವುದು.

■ **ವೈನತೇಯ**

## ಮಾತೇ ಮುತ್ತು

★ ಕಾನೂನುಗಳೆಂದರೆ ಜೇಡರ ಬಲೆಯಂತೆ. ಬಡ ಸಣ್ಣ ಜೀವಿಗಳು ಅದರ ಎದುರು ಬಂದರೆ ಸಿಕ್ಕಿಹಾಕಿಕೊಳ್ಳುತ್ತವೆ. ಆದರೆ ದೊಡ್ಡವುಗಳು ಅದನ್ನು ಕಡಿದು ಪಾರಾಗುತ್ತವೆ.

-ಸೊಲೋನ್

★ ದುರುದ್ದೇಶದಿಂದ ಹೇಳಿದ ಸತ್ಯ, ಸೃಷ್ಟಿಸಿ ಹೇಳಬಹುದಾದ ಎಲ್ಲ ಸುಳ್ಳುಗಳಿಗಿಂತ ಕೆಟ್ಟದ್ದು.

-ವಿಲಿಯಮ್ ಬ್ಲೇಕ್

★ ನಮ್ಮಲ್ಲಿ ಪರಸ್ಪರ ದ್ವೇಷಿಸಲು ಎಷ್ಟು ಬೇಕೋ ಅಷ್ಟು ನೀತಿ, ಧರ್ಮ ಇದೆಯೇ ಹೊರತು– ಪರಸ್ಪರ ಪ್ರೀತಿಸಲು ಅಗತ್ಯವಾದಷ್ಟು ಇಲ್ಲ.

-ಜೊನಾಥನ್ ಸ್ವಿಫ್ಟ್

★ 'ಶ್ರಮ'ಪಟ್ಟು ದುಡಿಯುವುದು ಒಂದು 'ಪ್ರತಿಭೆ' ಅಲ್ಲದಿರಬಹುದು! ಆದರೆ 'ಶ್ರಮ' 'ಪ್ರತಿಭೆ'ಗೆ ಸರಿಸಮಾನ ಅತ್ಯುತ್ತಮ ಬದಲಿ ವಸ್ತು.

-ಅನನ್

★ ನೀನು ನೇರ ದಾರಿಯಲ್ಲೇ ಇದ್ದರೂ, ಒಂದೆಡೆ ಕುಳಿತಿರಬಾರದು. ಹಾಗೆ ಕುಳಿತದ್ದೇ ಆದರೆ ಜನ ನಿನ್ನನ್ನು ತುಳಿದು ಮುಂದೆ ಹೋಗುತ್ತಾರೆ.

-ವಿಲ್ಸ್ ರೋಜರ್ಸ್

★ ಜಾಗರೂಕನಾಗಿರುವವನು ತಪ್ಪು ಮಾಡುವುದು ಅತಿ ವಿರಳ.

-ಕನ್‌ಫ್ಯೂಶಿಯಸ್

★ ಎಲ್ಲ ಹೆಂಗಳೆಯರೂ ಒಪ್ಪುವ, ಎಲ್ಲ ಗಂಡಸರೂ ಒಪ್ಪದೇ ಇರುವ ಒಂದೇ ವಿಷಯವೆಂದರೆ– ಮದುವೆ.

-ಆಸ್ಕರ್ ವೈಲ್ಡ್

★ ಬುದ್ಧಿಗೇಡಿ ಸ್ನೇಹಿತನಿರುವುದಕ್ಕಿಂತ ಬುದ್ಧಿಶಾಲಿಯಾದ ವಿರೋಧಿ ಇರುವುದು ಲೇಸು.

-ಶೇಕ್ಸ್‌ಪಿಯರ್

★ ಜಲಾಶಯದಲ್ಲಿ ನೀರು ಶಾಂತವಾಗಿದೆ; ಆದ್ದರಿಂದ ಅಲ್ಲಿ ಮೊಸಳೆಗಳಿಲ್ಲ ಎಂದು ಭಾವಿಸುವುದು ತಪ್ಪು.

-ಬಲ್ಗೇರಿಯಾ ಗಾದೆ

★ ಖ್ಯಾತಿ ಎಂದರೇನೆಂದು ತಿಳಿಯದವನು ಧನ್ಯ. ಖ್ಯಾತಿ ಬೇಕೆನ್ನುವುದೇ ನರಕ.

-ಇ.ಬಿ.ಲಿಟ್ಟನ್

★ ರಕ್ತಪಾತವಿಲ್ಲ ಎನ್ನುವುದನ್ನು ಬಿಟ್ಟರೆ ಚುನಾವಣೆ ಯುದ್ಧದಷ್ಟೇ ಅಪಾಯಕಾರಿ!

-ಬರ್ನಾರ್ಡ್ ಶಾ

★ ಮನುಷ್ಯರು ಅನ್ಯಾಯವನ್ನು ಒಪ್ಪದಿರುವುದು ತಾವು ಅದರ ಬಲೆಗೆ ಬಿದ್ದೇವೆಂಬ ಭಯದಿಂದಲೇ ಹೊರತು ನ್ಯಾಯಪ್ರಿಯತೆಯಿಂದ ಅಲ್ಲ!

-ಪ್ಲೇಟೋ